**ಸಿಸಿ ನಂ. 90/2023**

**ಪಿಡಬ್ಲೂ 1**

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 04-04-2025.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ಎಸ್ ವಕೀಲರಿಂದಃ**

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹೊಲದ ಕೆಲಸ ಮಾಡುತ್ತೇನೆ ಮತ್ತು ನನಗೆ ಸಂಬಂಧಿಸಿದ ಒಂದು ಶಾಲೆ ಇದೆ. ಸದರಿ ಶಾಲೆಯ ಹೆಸರು ಹುಲಿಗೆಮ್ಮ ದೇವಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ. ನಾನು ಸದರಿ ಸಂಸ್ಥೆಯ ಅಧ್ಯಕ್ಷನಾಗಿದ್ದೇನೆ. ಸದರಿ ಸಂಸ್ಥೆಯಲ್ಲಿ 9 ಜನ ಸದಸ್ಯರಿದ್ದಾರೆ. ಆರೋಪಿಯು ಸದರಿ ಸಂಸ್ಥೆಯಲ್ಲಿ 2022 ನೇ ಸಾಲಿನಲ್ಲಿ ಸದಸ್ಯನಾಗಿದ್ದ. ಈಗ ಆರೋಪಿ ಸದಸ್ಯನಿರುವುದಿಲ್ಲ. ಆರೋಪಿ ಪತ್ರಕರ್ತ. ಸದರಿ ಸಂಸ್ಥೆಗೆ ಕರ್ನಾಟಕದ ಯಾವುದೇ ಪ್ರದೇಶದ ಜನರು ಸದಸ್ಯರಾಗಬಹುದು ಎಂದರೆ ಸರಿ. ಸದರಿ ಸಂಸ್ಥೆ ನೋಂದಣಿ ಆಗಿರುತ್ತದೆ. ನಾನು ಸದರಿ ಸಂಸ್ದೆ ಅಡಿಯಲ್ಲಿ ಶಾಲೆಯನ್ನು ನಡೆಸುತ್ತಿದ್ದು, ಶಾಲೆಯನ್ನು 1 ರಿಂದ 5 ನೇ ತರಗತಿಯವರೆಗೆ ನಡೆಸುತ್ತಿದ್ದೇನೆ. ನಮ್ಮ ಸಂಸ್ಥೆಗೆ ಸದಸ್ಯರನ್ನಾಗಿ ಮಾಡಿಕೊಳ್ಳುವಾಗ ಅವರಿಂದ ಶುಲ್ಕವನ್ನು ಮತ್ತು ದಾಖಲಾತಿಗಳನ್ನು ಪಡೆದುಕೊಳ್ಳುತ್ತೀರಾ ಎಂದರೆ ಸಾಕ್ಷಿಯು ಏನನ್ನೂ ಪಡೆದುಕೊಳ್ಳುವುದಿಲ್ಲ, ಆಧಾರ ಕಾರ್ಡನ್ನು ಮಾತ್ರ ಪಡೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ 2022 ನೇ ಸಾಲಿನಲ್ಲಿ ಸಂಸ್ಥೆಯ ಸದಸ್ಯರಾಗಿದ್ದರಿಂದಲೇ ಅವರು ಪರಿಚಯ, ಆ ಮೊದಲು ಪರಿಚಯ ಇರಲಿಲ್ಲ. ಅಂದರೆ ಅದಕ್ಕಿಂತ ಮುಂಚೆ ನನಗೆ ಆರೋಪಿಯ ಪರಿಚಯ ಇರುವುದಿಲ್ಲ ಮತ್ತು ಅವರನ್ನು ನಾನು ನೋಡಿರುವುದೇ ಇಲ್ಲ ಎಂದರೆ ಸರಿ. ಆರೋಪಿ ನನಗೆ ಯಾವಾಗಿನಿಂದ ಪರಿಚಯ ಎಂದು ದೂರಿನಲ್ಲಿ ಬರೆಸಿರುತ್ತೇನೆಯೇ ಎಂದರೆ ಸಾಕ್ಷಿಯು 2022 ರಿಂದಲೇ ನನಗೆ ಪರಿಚಯ ಎಂದು ನುಡಿಯುತ್ತಾರೆ. 2022 ರಲ್ಲಿ ಯಾವ ತಿಂಗಳಿನಲ್ಲಿ ನನಗೆ ಆರೋಪಿಯ ಪರಿಚಯವಾಗಿರುತ್ತದೆ ಎಂದರೆ ಹೇಳಲಾಗುವುದಿಲ್ಲ. ನಾನು ದೂರಿನಲ್ಲಿ " ಆರೋಪಿ ಮತ್ತು ನನ್ನ ನಡುವೆ ಹಲವಾರು ಬಾರಿ ಹಣಕಾಸಿನ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರವನ್ನು ಮಾಡುತ್ತಾ ಬಂದಿರುತ್ತಾರೆ" ಎಂದು ನಮೂದು ಮಾಡಿದ್ದು, ಎಷ್ಟು ಬಾರಿ ನಾನು ಅವರಿಂದ ಮತ್ತು ಆರೋಪಿ ನನ್ನಿಂದ ಹಣಕಾಸಿನ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರ ನಡೆದಿರುತ್ತದೆ ಎಂದರೆ ಸಾಕ್ಷಿಯು ನಾನೇ ಅವರಿಗೆ ಕೊಟ್ಟಿರುತ್ತೇನೆ, ಅವರಿಂದ ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

2. ಆರೋಪಿ ತನ್ನ ಕುಟುಂಬದ ಅಡಚಣೆ ನೀಗಿಸಿಕೊಳ್ಳುವ ಸಲುವಾಗಿ ನನ್ನಿಂದ ದಿಃ 12-03-2023 ರಂದು ದುಡ್ಡನ್ನು ಕೇಳಿರುತ್ತಾರೆ. ಆರೋಪಿಯು ದುಡ್ಡನ್ನು ನಾನು ಚಿಗಳ್ಳಿ ಗ್ರಾಮದಲ್ಲಿ ಇದ್ದಾಗ ಬಂದು ಕೇಳಿದ್ದ. ನಾನು ಆರೋಪಿಯ ಮನೆಯ ಪರಿಸ್ಥಿತಿಯನ್ನು ಹೋಗಿ ನೋಡಿ ಹಣವನ್ನು ಕೊಟ್ಟೆನೇ ಎಂದರೆ ಇಲ್ಲ, ಹೋಗಿ

ನೋಡಿರುವುದಿಲ್ಲ, ಹಾಗೇ ಕೊಟ್ಟೆನು. ಯಾವ ಮಾನದಂಡದ ಮೇಲೆ ಆರೋಪಿಯ ಆರ್ಥಿಕ ಪರಿಸ್ಥಿತಿ ಸರಿಯಿರುವುದಿಲ್ಲ ಎಂದು ನಾನು ತಿಳಿದುಕೊಂಡೆನು ಎಂದರೆ ಸಾಕ್ಷಿಯು ಆರೋಪಿ ಬಂದು ಮನೆಯಲ್ಲಿ ಕಷ್ಟ ಇದೆ ಎಂದು ಹೇಳಿರುತ್ತಾನೆ, ನಾನು ಅವನ ಆರ್ಥಿಕ ಪರಿಸ್ಥಿತಿಯ ಬಗ್ಗೆ ಏನೂ ತಿಳಿದುಕೊಂಡಿರುವುದಿಲ್ಲ. ನಾನು ಆರೋಪಿಗೆ ಹಣವನ್ನು ಕೊಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ನಾನು ಆರೋಪಿಗೆ 2 ಲಕ್ಷ ರೂಪಾಯಿಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಈ ಬಗ್ಗೆ ನಾನು ಫಿರ್ಯಾದಿಯಲ್ಲಿ ಬರೆಸಿರುವುದಿಲ್ಲ ಎಂದರೆ ಬರೆಸಿದ್ದೇನೆ. ಸದರಿ ದುಡ್ಡನ್ನು ಯಾವಾಗ ಮರುಪಾವತಿ ಮಾಡಬೇಕು ಎನ್ನುವ ಬಗ್ಗೆ ಮಾತನಾಡಿಕೊಂಡೆವೆ ಎಂದರೆ ಇಲ್ಲ. ಫಿರ್ಯಾದಿಯಲ್ಲಿ ಏನೂ ಮರುಪಾವತಿಯ ಬಗ್ಗೆ ನಾನು ಬರೆಸಿರುವುದಿಲ್ಲ ಎಂದರೆ ಇಲ್ಲ.

3. ಆರೋಪಿ 2 ನೇ ಬಾರಿಗೆ ನನ್ನ ಬಳಿ ಬಂದು ತನ್ನ ಪರಿಸ್ಥಿತಿ ಸರಿಯಿಲ್ಲ ಎಂದು ಯಾವ ತಾರೀಖಿನಂದು ದುಡ್ಡನ್ನು ಕೇಳಿದನು ಎಂದರೆ ಮೊದಲನೇ ಬಾರಿಗೆ 2 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋದ ಸುಮಾರು 15-20 ದಿನಗಳ ನಂತರ ಎಂದು ನುಡಿಯುತ್ತಾರೆ. 2 ನೇ ಬಾರಿಗೆ ಆರೋಪಿಗೆ 2 ಲಕ್ಷ ರೂಪಾಯಿಗಳನ್ನು ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಕೊಟ್ಟಿರುತ್ತೇವೆ. ಆರೋಪಿ 2 ನೇ ಬಾರಿಗೆ ದುಡ್ಡನ್ನು ಕೇಳಿದ 2 ದಿನಗಳ ನಂತರ ನಾನು ಹಣವನ್ನು ನೀಡಿರುತ್ತೇನೆ. 2 ನೇ ಬಾರಿ ಆರೋಪಿ ನನ್ನ ಬಳಿ ದುಡ್ಡನ್ನು ಕೇಳಲು ಬಂದಾಗ ಮೊದಲು ಕೊಟ್ಟಿದ್ದ 2 ಲಕ್ಷ ರೂಪಾಯಿಗಳ ಬಗ್ಗೆ ನಾನು ವಿಚಾರಿಸಿದೇನೆಯೇ, ಮನೆಯ ಪರಿಸ್ಥಿತಿ ಸುಧಾರಿಸಿದೆಯೇ ಎಂದು ಕೇಳಿದ್ದೇನೆಯೇ ಎಂದರೆ ಸಾಕ್ಷಿಯು ಕೇಳಿದೆ, ಆರೋಪಿಯು ತನ್ನ ಅಳಿಯನ ಮದುವೆ ಇದ್ದ ಕಾರಣ ದುಡ್ಡನ್ನು ಕೊಡುವಂತೆ ವಿನಂತಿಸಿದ್ದು, ಆ ಪ್ರಕಾರ ಕೊಟ್ಟೆನು ಎಂದು ನುಡಿಯುತ್ತಾರೆ. ಕೊನೆಯ ಬಾರಿ ನಾನು ಕೊಟ್ಟ ಒಟ್ಟು 4 ಲಕ್ಷ ರೂಪಾಯಿಗಳನ್ನು ವಾಪಾಸ್ಸು ಕೊಡುವಂತೆ ಆರೋಪಿಗೆ ಯಾವಾಗ ಕೇಳಿದೆನು ಎಂದರೆ ಸಾಕ್ಷಿಯು ದಿಃ 13-04-2023 ಎಂದು ನುಡಿಯುತ್ತಾರೆ. ನಾನು ಆರೋಪಿಗೆ ದುಡ್ಡನ್ನು ಮರುಪಾವತಿ ಮಾಡುವಂತೆ ಕೇಳಿದಾಗ ಆರೋಪಿ ತನ್ನ ಊರಾದ ಹುನಗೂರನಲ್ಲಿ ಇದ್ದನು.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.**

ನನ್ನ ಸಮಕ್ಷಮ

**-Sd-**

**ಪ್ರ.ದ.ನ್ಯಾದಂ. ಮುಂಡಗೋಡ.**